# ಕಣ್ಣೂರು ಕೋಟೆ



**ಅರಬ್ಬಿ ಸಮುದ್ರದ ಕಡೆಗೆ ಮುಖ ಮಾಡಿರುವ ತ್ರಿಕೋನಾಕಾರದ ಸೈಂಟ್ ಏಂಜೆಲೋ ಕೋಟೆ ನಯನ ಮನೋಹರವಾಗಿದೆ.**

ಚಿತ್ರ– ಲೇಖನ: **ಶ್ರೀನಾಥ್, ಎಸ್.**



ಕೇರಳದ ಕಣ್ಣೂರಿನಲ್ಲಿ ನೋಡಬಹುದಾದ ಸ್ಥಳ 'ಕಣ್ಣೂರು ಕೋಟೆ' ಎಂದೇ ಪ್ರಸಿದ್ಧವಾದ ಸೈಂಟ್ ಏಂಜೆಲೋ ಕೋಟೆ.

ನೋಡಲು ಐದು ಕಾರುಗಳಲ್ಲಿ, ಐದು ಕುಟುಂಬ ಹೊರಟಿದ್ದು ಹುಣಸೂರು ಮಾರ್ಗವಾಗಿ. ಹುಣಸೂರಿನಲ್ಲಿ ತಿಂಡಿ ತಿಂದು, ಗೋಣಿಕೊಪ್ಪ, ವಿರಾಜಪೇಟೆ ದಾಟಿ ಬ್ರಹ್ಮಗಿರಿ ಅರಣ್ಯ ವಲಯದ ಹಾದಿ ತಲುಪಿದರೆ ನೆಲಕ್ಕೆ ಸೂರ್ಯನ ಕಿರಣವೇ ತಾಕದಷ್ಟು ದಟ್ಟವಾದ ಕಾಡು. ಮರಗಳು, ಮಂಗಗಳ ಓಡಾಟ, ದಾರಿಯುದ್ದಕ್ಕೂ ಅಲ್ಲಲ್ಲಿ ಸಿಗುವ ನದಿಯ ಹರಿವಿನ ಜುಳು ಜುಳು.. ಹೊಸದೊಂದು ಲೋಕದ ಭ್ರಮೆ ಹುಟ್ಟಿಸಿದವು.

ಕಾಡಿನ ಹಾದಿಯಲ್ಲಿ ಇಳಿದು ಫೋಟೋ ಕ್ಲಿಕ್ಕಿಸಿದ್ದೂ ಆಯಿತು. ಕಾಡು ಮುಗಿದು, ಕೇರಳದ ಮಟ್ಟಾನೂರು ದಾಟಿ, ಕಣ್ಣೂರು ತಲುಪಿದೆವು. ಸಂಜೆ 4ರ ಹೊತ್ತಿಗೆ ಟೀ ಕುಡಿದು ಹೊರಟಿದ್ದು, ನಮ್ಮ ರೆಸಾರ್ಟ್‌ಗೆ ಸಮೀಪದಲ್ಲೇ ಇದ್ದ ಸೈಂಟ್ ಏಂಜೆಲೋ ಕೋಟೆಗೆ. ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಂತೆ ಇರುವ ಈ ಕೋಟೆಯನ್ನು ಕ್ರಿ.ಶ. 1505 ರಲ್ಲಿ ಪೋರ್ಚುಗೀಸರು ನಿರ್ಮಾಣ ಮಾಡಿದರು. ಡಚ್ಚರು 1663ರಲ್ಲಿ ಈ ಕೋಟೆಯನ್ನು ಪೋರ್ಚುಗೀಸ್‌ರಿಂದ ವಶಪಡಿಸಿಕೊಂಡು ಅಭಿವೃದ್ಧಿಪಡಿಸಿದರು. 1772ರಲ್ಲಿ ಡಚ್ಚರು ಈ ಕೋಟೆಯನ್ನು ಕಣ್ಣೂರಿನ ರಾಜ ಆಲಿಗೆ ಮಾರಿದರು. 1790 ರಲ್ಲಿ ಬ್ರಿಟಿಷರು ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಮಲಬಾರ್ ಪ್ರಾಂತ್ಯದ ಮಿಲಿಟರಿಯ ಮುಖ್ಯ ನೆಲೆಯಾಗಿಸಿಕೊಂಡರು. ಈಗ ಪುರಾತತ್ವ ಇಲಾಖೆಯಿಂದ ಸಂರಕ್ಷಿತ ತಾಣವಾಗಿ ಗುರುತಿಸಲ್ಪಟ್ಟಿದ್ದು, ಸಾರ್ವಜನಿಕರಿಗೆ ವಾರದ ಎಲ್ಲ ದಿನ ಬೆಳಗ್ಗೆ 8 ರಿಂದ ಸಂಜೆ 6 ರವರೆಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಕೋಟೆಯು ತ್ರಿಕೋನಾಕಾರದಲ್ಲಿದ್ದು ಅರಬ್ಬಿ ಸಮುದ್ರದ ಕಡೆಗೆ